## ಕರ್ನಾಟಕ ಸರ್ಕಾರದ ನಡವಳಿಗಳು

2022-23

ವಿಷಯ : M/s FPEL Ujwal Private Limited ರವರಿಗೆ ಬೆಳಗಾವಿ ಜಿಲ್ಲೆಯ, ನಿಪ್ಪಾಣಿ ತಾಲ್ಲೂಕಿನ ವಿವಿಧ ಗ್ರಾಮಗಳಲ್ಲಿ 50 ಮೆ.ವ್ಯಾ. ಸಾಮರ್ಥ್ಯದ ಪವನ ಮತ್ತು ಸೌರ ಮಿಶ್ರಿತ ಹೈಬ್ರಿಡ್ ವಿದ್ಯುತ್ ಯೋಜನೆಯನ್ನು ಹಂಚಿಕೆ ಮಾಡುವ ಕುರಿತು.

**ಓದಲಾಗಿದೆ :** 1)ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ ರವರ ಪತ್ರ ಸಂಖ್ಯೆ:KREDL/ 08/ FPELUPL-50 MW (29.7 M + 20.3 S)/Nippani/F- 36(2022) /948, ದಿನಾಂಕ:16.04.2022.

2) ದಿನಾಂಕ:19.04.2022 ರಂದು ನಡೆದ ಹಂಚಿಕೆ ಸಮಿತಿ ಸಭೆಯ ನಡವಳಿ.

**ಪ್ರಸ್ತಾವನೆ :-**

ಮೇಲೆ ಓದಲಾದ (1)ರ ಪತ್ರದಲ್ಲಿ ವ್ಯವಸ್ಥಾಪಕ ನಿರ್ದೇಶಕರು, ಕೆ.ಆರ್.ಇ.ಡಿ.ಎಲ್. ಇವರು ಸರ್ಕಾರಕ್ಕೆ ಸಲ್ಲಿಸಿರುವ ಪ್ರಸ್ತಾವನೆಯಲ್ಲಿ M/s FPEL Ujwal Private Limited ರವರು ಬೆಳಗಾವಿ ಜಿಲ್ಲೆಯ, ನಿಪ್ಪಾಣಿ ತಾಲ್ಲೂಕಿನ ಶೆಂಡೂರ್ ಮತ್ತು ಗೊಂಡಿಕುಪ್ಪಿ ಗ್ರಾಮಗಳಲ್ಲಿ 50 ಮೆ.ವ್ಯಾ (29.7 ಮೆ.ವ್ಯಾ ಪವನ + 20.3 ಮೆ.ವ್ಯಾ ಸೌರ) ಸಾಮರ್ಥ್ಯದ ಪವನ ಮತ್ತು ಸೌರ ಮಿಶ್ರಿತ ಹೈಬ್ರಿಡ್ ಯೋಜನೆಯ ಕುರಿತು ವಿಸ್ತೃತ ಯೋಜನಾ ವರದಿಯನ್ನು ತಯಾರಿಸಿ, ಕ್ರೆಡಲ್‌ಗೆ ಸಲ್ಲಿಸಿರುವುದಾಗಿ ಹಾಗೂ ಸದರಿ ಯೋಜನೆಯಿಂದ ಉತ್ಪಾದನೆಯಾಗುವ ವಿದ್ಯುತ್ತನ್ನು ವೀಲಿಂಗ್ ಮತ್ತು ಬ್ಯಾಂಕಿಂಗ್ ಮುಖಾಂತರ ಸ್ವಂತ ಬಳಕೆಗೆ/ ಮೂರನೇ ವ್ಯಕ್ತಿಗೆ ಮಾರಾಟ ಮಾಡುವ ವರ್ಗದಡಿ ಪ್ರತಿ ವಿಂಡ್ ಟರ್ಬೈನ್ ಗೆ 4 ಎಕರೆಯಂತೆ Footprint basis ಲೆಕ್ಕೀಕರಿಸಿ, ಜಮೀನುಗಳನ್ನು ಉಪಯೋಗಿಸುವುದು ಮತ್ತು ಪವನ ವಿದ್ಯುತ್ ಘಟಕಗಳ ಅಂತರವನ್ನು MNRE ಸುತ್ತೋಲೆ/ಮಾರ್ಗಸೂಚಿಯಂತೆ ಅಳವಡಿಸುವಂತೆ ಷರತ್ತುಗಳನ್ನು ವಿಧಿಸಿ, ಹಂಚಿಕೆ ನೀಡುವಂತೆ ಕೋರಿರುವುದಾಗಿ ತಿಳಿಸಿರುತ್ತಾರೆ.

ಮುಂದುವರೆದು, M/s FPEL Ujwal Private Limited ವಿಂಡ್ ಟರ್ಬೈನ್‌ಗಳನ್ನು ಅಳವಡಿಸಲು ಉದ್ದೇಶಿಸಿರುವ ಸ್ಥಳದ ಪ್ರಸ್ತಾವನೆಯನ್ನು ಪರಿಶೀಲಿಸಲಾಗಿ, ಸದರಿ ಸ್ಥಳವು M/s Energon Shivalik Wind Power Private Limited ರವರಿಗೆ ದಿನಾಂಕ:25.11.2017ರಂದು ನಡೆದ ಹಂಚಿಕೆ ಸಮಿತಿ ಸಭೆಯಲ್ಲಿ 48 ಮೆ.ವ್ಯಾ. ಸಾಮರ್ಥ್ಯಕ್ಕೆ ತಾತ್ವಿಕ ಅನುಮೋದನೆ ನೀಡಲು ಶಿಫಾರಸ್ಸುಗೊಂಡಿರುತ್ತದೆ. ಆದರೆ ಸದರಿಯವರಿಗೆ ತಾತ್ವಿಕ ಅನುಮೋದನೆಯನ್ನು ನೀಡಿರುವುದಿಲ್ಲ. ಸದರಿಯವರು 2 ಮೆ.ವ್ಯಾ. ಸಾಮರ್ಥ್ಯದ 24 ಸಂಖ್ಯೆಯ ವಿಂಡ್ ಟರ್ಬೈನ್‌ಗಳನ್ನು ಅಳವಡಿಸುತ್ತಿರುವ ಪ್ರದೇಶವು ಸುಮಾರು 18,000 ಎಕರೆ ವಿಸ್ತೀರ್ಣವನ್ನು ಹೊಂದಿರುತ್ತದೆ. ಪ್ರಸ್ತುತ ಸರ್ಕಾರವು ಪ್ರತಿ ವಿಂಡ್ ಟರ್ಬೈನ್‌ಗೆ 04 ಎಕರೆಯಂತೆ ನೀಡಲಾಗುತ್ತಿದ್ದು, ಇದರಂತೆ M/s Energon Shivalik Wind Power Private Limited ಪ್ರತಿ ವಿಂಡ್ ಟರ್ಬೈನ್ ಗೆ 04 ಎಕರೆಯಂತೆ ಲೆಕ್ಕೀಕರಿಸಿ 96 ಎಕರೆ ಜಮೀನನ್ನು ಉಪಯೋಗಿಸಿಕೊಳ್ಳಬಹುದಾಗಿದೆ ಹಾಗೂ M/s FPEL Ujwal Private Limited ರವರ 29.7 ಮೆ.ವ್ಯಾ. ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಗೆ 11 ವಿಂಡ್ ಟರ್ಬೈನ್‌ಗಳಿಗೆ ಪ್ರತಿ ವಿಂಡ್ ಟರ್ಬೈನ್‌ಗೆ 04 ಎಕರೆಯಂತೆ ಲೆಕ್ಕೀಕರಿಸಿ 44 ಎಕರೆ (11 Nos of WTG X 4 Acres = 44 Acres) ಜಮೀನು ಹಾಗೂ 20.3 ಮೆ.ವ್ಯಾ. ಸಾಮರ್ಥ್ಯದ ಸೌರ ಘಟಕಗಳನ್ನು ಅಳವಡಿಸಲು ಪ್ರತಿ ಮೆ.ವ್ಯಾ. ಸಾಮರ್ಥ್ಯಕ್ಕೆ 3.5 ಎಕರೆಯಂತೆ 71 ಎಕರೆ (20.3 MW X 3.5 Acre = 71 acres) ಜಮೀನು ಸೇರಿ ಒಟ್ಟು 115 ಎಕರೆ (44 Acre + 71 Acre = 115 Acres) ಜಮೀನನ್ನು ಉಪಯೋಗಿಸಿಕೊಳ್ಳಬಹುದಾಗಿದೆ ಎಂದು ಕೆ.ಆರ್.ಇ.ಡಿ.ಎಲ್. ರವರು ಅಭಿಪ್ರಾಯಿಸಿರುತ್ತಾರೆ.

M/s FPEL Ujwal Private Limited ದಿನಾಂಕ:04.02.2022 ರಂದು ನೋಂದಾವಣೆಗೊಂಡಿದ್ದು, ಇದರ ನೋಂದಾಯಿತ ಕಚೇರಿಯು ತೆಲಂಗಾಣದ ಹೈದರಾಬಾದಿನಲ್ಲಿ ಸ್ಥಾಪಿತಗೊಂಡಿರುತ್ತದೆ. ಸದರಿಯವರ ನೆಟ್‌ವರ್ತ್ ದಿನಾಂಕ:31.03.2021ರ ಅಂತ್ಯಕ್ಕೆ ರೂ.334.62 ಕೋಟಿಗಳಾಗಿರುತ್ತದೆ ಎಂದು ಚಾರ್ಟೆಡ್ ಅಕೌಂಟೆಂಟ್ ರವರು ದೃಢೀಕರಣ ಪತ್ರವನ್ನು ನೀಡಿರುತ್ತಾರೆ.

ಮೇಲೆ ಓದಲಾದ (2)ರ ಹಂಚಿಕೆ ಸಮಿತಿ ಸಭೆಯಲ್ಲಿ M/s FPEL Ujwal Private Limited ರವರು ಬೆಳಗಾವಿ ಜಿಲ್ಲೆಯ, ನಿಪ್ಪಾಣಿ ತಾಲ್ಲೂಕಿನ ಶೆಂಡೂರ್ ಮತ್ತು ಗೊಂಡಿಕುಪ್ಪಿ ಗ್ರಾಮಗಳಲ್ಲಿ State Grid ವರ್ಗದಡಿಯಲ್ಲಿ ಹಂಚಿಕೆ ನೀಡುವಂತೆ ಕೋರಿರುವ 50 ಮೆ.ವ್ಯಾ (29.7 ಮೆ.ವ್ಯಾ ಪವನ + 20.3 ಮೆ.ವ್ಯಾ ಸೌರ) ಸಾಮರ್ಥ್ಯದ ಹೈಬ್ರಿಡ್ ಯೋಜನೆಯ ಸ್ಥಳವು ಖಾಸಗಿ ಜಮೀನಾಗಿರುತ್ತದೆ. ಸದರಿಯವರು ಅಳವಡಿಸುವ ವಿಂಡ್ ಟರ್ಬೈನ್ ಗಳಿಗೆ ಅಕ್ಷಾಂಶ ಮತ್ತು ರೇಖಾಂಶಗಳನ್ನು ನೀಡಿರುತ್ತಾರೆ. ಸದರಿಯವರು 11 ಸಂಖ್ಯೆಯ ವಿಂಡ್ ಟರ್ಬೈನ್‌ಗಳನ್ನು (2700 ಕಿ.ವ್ಯಾ ಸಾಮರ್ಥ್ಯದ ಟರ್ಬೈನ್‌ಗಳು) ಅಳವಡಿಸಲು ಪ್ರತಿ ಟರ್ಬೈನ್‌ಗೆ 04 ಎಕರೆಯಂತೆ 44 ಎಕರೆ (11Nos of WTG x 4 Acres = 44 Acres) ಜಮೀನನ್ನು ಹಾಗೂ 20.3 ಮೆ.ವ್ಯಾ ಸಾಮರ್ಥ್ಯದ ಸೌರ ಘಟಕಗಳನ್ನು ಅಳವಡಿಸಲು ಪ್ರತಿ ಮೆ.ವ್ಯಾ ಸಾಮರ್ಥ್ಯಕ್ಕೆ 3.5 ಎಕರೆಯಂತೆ 71 ಎಕರೆ (20.3MW x 3.5 Acre = 71 Acres) ಜಮೀನು ಸೇರಿ ಒಟ್ಟು 115 ಎಕರೆ (44 Acre + 71 Acre =115 Acres) ಜಮೀನನ್ನು ಮಾತ್ರ ಹೈಬ್ರಿಡ್ ಯೋಜನೆಗೆ ಉಪಯೋಗಿಸಬಹುದಾಗಿರುತ್ತದೆ. ಸದರಿಯವರು 50 ಮೆ.ವ್ಯಾ (29.7 ಮೆ.ವ್ಯಾ ಪವನ + 20.3 ಮೆ.ವ್ಯಾ ಸೌರ) ಸಾಮರ್ಥ್ಯದಿಂದ ಉತ್ಪಾದಿಸುವ ವಿದ್ಯುತ್ ನ್ನು State Grid ವರ್ಗದಡಿಯಲ್ಲಿ 110 kV KPTCL substation at Nippani ಗೆ evacuate ಮಾಡುವುದಾಗಿ ತಿಳಿಸಿರುತ್ತಾರೆ. ಆದರೆ, ಮುಖ್ಯ ಇಂಜಿನಿಯರ್ (Planning & Co-ordination), ಕೆ.ಪಿ.ಟಿ.ಸಿ.ಎಲ್ ರವರು ಸಭೆಯಲ್ಲಿ ಸದರಿ ಯೋಜನೆಗೆ ಕಣಗನಾಲ್‌ನಲ್ಲಿ ಉದ್ದೇಶಿತ KIADB 220 kV substation ಪೂರ್ಣಗೊಂಡ ನಂತರ ಹಾಗೂ 110 kV ನಿಪ್ಪಾಣಿ substation ಮತ್ತು ಕಣಗನಾಲ್ ನಡುವೆ 110 kV ಲಿಂಕ್‌ಲೈನ್ ನಿರ್ಮಾಣ ಆದ ನಂತರ evacuate ಮಾಡಬಹುದಾಗಿದೆ ಎಂದು ತಿಳಿಸುತ್ತಾ, ಈ ಕೆಳಕಂಡ ಷರತ್ತುಗಳಿಗೊಳಪಟ್ಟು, M/s FPEL Ujwal Private Limited ರವರಿಗೆ 50 ಮೆ.ವ್ಯಾ. ಸಾಮರ್ಥ್ಯದ ಪವನ ಮತ್ತು ಸೌರ ಮಿಶ್ರಿತ ಹೈಬ್ರಿಡ್ ವಿದ್ಯುತ್ ಯೋಜನೆಯನ್ನು ಹಂಚಿಕೆ ನೀಡಲು ಸಮಿತಿಯು ಸರ್ವಾನುಮತಿಯಿಂದ ಶಿಫಾರಸ್ಸು ಮಾಡಿರುತ್ತದೆ.

i. ಸದರಿ ಯೋಜನೆಯಿಂದ ಉತ್ಪಾದನೆಯಾಗುವ ವಿದ್ಯುತ್ ನ್ನು ವೀಲಿಂಗ್ ಮತ್ತು ಬ್ಯಾಂಕಿಂಗ್ ಮುಖಾಂತರ ಸಮೂಹ ಸ್ವಂತ ಬಳಕೆ/3 ನೇ ವ್ಯಕ್ತಿಗೆ ಮಾರಾಟ ಮಾಡುವುದು.

ii. ಸದರಿ ಯೋಜನೆಗೆ 110 kV ನಿಪ್ಪಾಣಿ substation ಅಥವಾ Evacuation ಲಭ್ಯವಿರುವ Substation ಗೆ KPTCL ನಿಂದ evacuation ಅನುಮತಿ ನೀಡುವುದು.

iii. ಈಗಾಗಲೇ ಇತರೆ ಅಭಿವೃದ್ಧಿದಾರರುಗಳು ಹಂಚಿಕೆ/ತಾತ್ವಿಕ ಅನುಮೋದನೆಯನ್ನು ಪಡೆದಿರುವ ಪ್ರದೇಶದಲ್ಲಿ ಪ್ರಸ್ತಾಪಿತ ಯೋಜನೆಯು Overlap ಆಗಿದ್ದಲ್ಲಿ, ಸದರಿಯವರು ಕೋರಿರುವ ಪ್ರಸ್ತಾವನೆಯ ಹಂಚಿಕೆಯು ರದ್ದುಗೊಳ್ಳುತ್ತದೆ.

iv. ಅಭಿವೃದ್ಧಿದಾರರು ಸದರಿ ಹೈಬ್ರಿಡ್ (ವಿಂಡ್+ಸೋಲಾರ್) ಯೋಜನೆಯನ್ನು MNRE ರವರ ಮಾರ್ಗಸೂಚಿಗಳು ಮತ್ತು ರಾಜ್ಯ ಸರ್ಕಾರದ ಹೊಸ RE Policy 2022-27 ರ ಪ್ರಕಾರ ಅನುಷ್ಠಾನಗೊಳಿಸುವುದು.

**Tentative Latitude and Longitude of WTG Locations for 50 MW (29.7 MW Wind + 20.3 MW Solar) capacity Wind-Solar Hybrid Project of M/s FPEL Ujwal Private Limited**

| Sl No | WTG No | Latitude | Longitude | Village | Taluk / District | Sy No | Extent of land required on footprint basis i.e 4 acres/ WTG for wind and 3.5 acres/MW for solar projects |
|---|---|---|---|---|---|---|---|
| 1 | GE 01 | 16°22'17.01"N | 74°19'22.57"E | Shendur | Nippani/ Belagavi | 337, 338 | 4 |
| 2 | GE 02 | 16°22'6.41"N | 74°19'24.85"E | Shendur | | 343 | 4 |